ಮಾಡಿ ಕ್ರಮತೆಗೆದುಕೊಳ್ಳಬೇಕೆಂದು ಆಲೋಚನೆಮಾಡಿದೆ. ಆದರೆ ಅದಕ್ಕೆ ಸಾಲ ನಾವು ಕೊಡಬೇಕೇ? ಕೊಟ್ಟರೆ ಹೇಗೆ? ಅಥವಾ ಸರ್ಕಾರ ಏನು ಮಾಡಬೇಕು, ಹೇಗೆ ಮಾಡಬೇಕು ಇದನ್ನೆಲಾ ನಾವು ಯೋಚನೆ ಮಾಡುತ್ತಿದ್ದೇವೆ, ಆದಷ್ಟು ತೀವ್ರವಾಗಿ ಇದರ ಬಗ್ಗೆ ಒಂದು ತೀರ್ಮಾನಕೆ ಬರುತ್ತೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಮಿಲ್ಲಿನವರು ಲೀಸ್ ಅಮೌಂಟ್ ೩೦ ಲಕ್ಷ ರೂಪಾಯಿ ಯನ್ನು ಸೊಸೈಟಿಗೆ ಕೊಟ್ಟಿದ್ದಾರೆ. ಅದು ಸರ್ಕಾರಕ್ಕೆ ಗೊತ್ತಿಲ್ಲದೇ ಇರಬಹುದು. ಅದನ್ನು ಸೊಸೈಟಿ ಯವರು ಇಟ್ಟುಕೊಂಡು ಬಿಟ್ಟಿದ್ದಾರೆ. ಈ ಸೊಸೈಟಿ ಏನು ಇದೆ ಇದಕ್ಕೆ ಏನೂ ಕೆಲಸವಿಲ್ಲ. ಜೊತೆಗೆ ಅಲ್ಲಿ ಮೀಟಿಂಗ್ ನಡೆಸಿದರೆ ಅದರ ಸದಸ್ಯರಿಗೆ ಒಂದು ದಿವಸಕೆ ೧೦೦ರಿಂದ ೨೦೦ ರೂಪಾಯಿವರೆಗೆ ದಿನ ಭತ್ಯವನ್ನು ಕೊಡುತ್ತಿದ್ದಾರೆ ಜೊತೆಗೆ ಇನ್ನು ಅನೇಕ ರೀತಿಯ ಅವ್ಯವಹಾರ ಆಗುತ್ತಿದೆಯೆಂದು ಕೇಳಿ ದ್ದೇನೆ. ಆದ್ದರಿಂದ ಸರ್ಕಾರ ಯಾವುದಾದರೂ ಒಂದು ವ್ಯವಸ್ಥೆಯನ್ನು ಕೂಡಲೇ ಮಾಡಬೇಕೆಂದು ಕೇಳುಕೊಳ್ಳುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್.—ನಾನು ಮೊದಲೇ ಹೇಳಿದ್ದೇನೆ. ಅದರಲ್ಲಿ ನಿಮಗೂ ನಮಗೂ ಏನೂ ವ್ಯತ್ಯಾಸವಿಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ,—ಸೊಸೈಟಿ ಮುಖಾಂತರ ನಡೆಸಲಿ ಆದರೆ ಅದರ ಮುಂದೆ ಭವಿಷ್ಯ ಹಾಳಾಗದಂತೆ ನೋಡಿಕೊಳ್ಳಿ. ಎಷ್ಟು ಬೇಗ ಆದರೆ ಅಷ್ಟು ಬೇಗ ಮಾಡಬೇಕು.

ಶ್ರೀ ಡಿ. ದೇವರಾಜ್ ಅರಸ್.—ಆಗಬಹುದು.

Matter under Rule 312

re: Transfer of Myore Match Co., to Wimco

ಶ್ರೀ ಎಸ್. ಆರ್.ಬೊಮ್ಮಾಯಿ.—ಸ್ವಾಮಿ,ರೂಲ್ ೩೧೨ರ ಪ್ರಕಾರ ನಾನು ಹೇಳುವುದು ಇಷ್ಟೆ. ವಿಮ್ಕೋ ಇಂಡಸ್ಟ್ರೀಸ್ ಬಗ್ಗೆ ಮಾತನಾಡುವಾಗ ಕೆಲವು ವಿಚಾರಗಳನ್ನು ಹೇಳುತ್ತೇನೆ. ಸರ್ಕಾರ ಅದರ ಬಗ್ಗೆ ತನ್ನ ಅಭಿಪ್ರಾಯ ಕೊಟ್ಟರೆ ಚೆನ್ನಾಗಿ ಇರುತ್ತದೆ ಅದನ್ನು ಹೇಳುವುದಕ್ಕೆ ಮೊದಲು ವಿಮ್ಕೋ ಪ್ರೈವೇಟ್ ಲಿಮಿಟೆಡ್, ಬಾಂಬೆ ನಮ್ಮಲ್ಲಿ ಇರತಕ್ಕಂಥ ಕಚ್ಚಾಮಾಲು ಉಪಯೋಗಮಾಡಿಕೊಂಡು ಬಾಂಬೆಗೆ ಕಳುಹಿಸುತ್ತಾರೆ ಹಾಗೂ ಮದ್ರಾಸ್‌ಗೆ ಕಳುಹಿಸುತ್ತಾರೆ. ಅದು ಮ್ಯಾಚ್‌ಬಾಕ್ಸ್ ತಯಾರು ಮಾಡು ತ್ತಾರೆ. ಇದಕ್ಕೆ ಹಿಂದಿನ ಸರ್ಕಾರ ಮನಾಪಲಿ ಆಗಬಾರದೆಂದು ಗೌರ್ನಮೆಂಟ್ ಮ್ಯಾಚ್ ಫ್ಯಾಕ್ಟರಿ ಫಾರಂ ಮಾಡಿ ಅದರಲ್ಲಿ ೨೦-೩೦ ಸ್ಮಾಲ್ ಸ್ಕೇಲ್ ಫ್ಯಾಕ್ಟರೀಸ್‌ಗಳಿಗೆ ಅವಕಾಶಮಾಡಿ ಕೊಟ್ಟಿದ್ದರು. ಈ ಫ್ಯಾಕ್ಟರಿಗಳು ಮ್ಯಾಚಸ್ ತಯಾರು ಮಾಡುತ್ತಿದ್ದರು. ಇದು ಗೌರ್ನಮೆಂಟ್ ಆಫ್ ಇಂಡಿಯಾ ಹಾಗೂ ನಮ್ಮ ರಾಜ್ಯ ಸರ್ಕಾರದವರ ಪಾಲಿಸಿ. ಸರ್ಕಾರ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ನಿಲ್ಲಬಾರದು ಎಂದು ಆ ಉದ್ದೇಶದಿಂದ ಈ ಕಂಪನಿಗೆ ಸಹಾಯ ಮಾಡಿದ್ದರು. ಆದರೆ ಈ ಕಂಪನಿಯು ಜನರಲ್ ಮೀಟಿಂಗ್ ಮಾಡದೆ ಇದನ್ನು ನಡೆಸಲಿಕ್ಕೆ ಕೊಟ್ಟು ಬಿಟ್ಟಿದ್ದಾರೆ. ಈ ರಾಜ್ಯದಲ್ಲಿ ಉತ್ಪಾದನೆ ಆಗತಕ್ಕಂಥ ಟಿಂಬರ್‌ನ್ನು ಮನಾಪಲಿ ಮಾಡಿಕೊಂಡು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ನೀತುಹೋಗುತ್ತಿವೆ. ಆದ್ದರಿಂದ ಕಚ್ಚಾ ಮಾಲುಗಳನು ಉಪಯೋಗ ಮಾಡಿಕೊಂಡು ಕಂಪನಿ ನಮ್ಮ ಜನರಿಗೆ ಸಹಾಯವನ್ನು ಮಾಡುತ್ತಿಲ್ಲ. ಈ ಕಂಪನಿ ರಿಜಿಸ್ಟರ್ ಆಗಿರುವುದು. ಬಾಂಬೆಯಲ್ಲಿ ಅಲ್ಲಿ ನಮ್ಮವರಿಗೆ ಎಂಪ್ಲಾಯ್‌ಮೆಂಟ್ ಕೊಡುತ್ತಿಲ್ಲ.ಈ ರೀತಿಯಾದ ಎಲ್ಲಾ ಸೌಲತ್ತುಗಳನ್ನು ಪಡೆದು ನಮ್ಮ ಜನರಿಗೆ ಯಾವರೀತಿಯಿಂದಲೂ ಸಹಾಯ ಕೊಡು ತ್ತಿಲ್ಲ. ಆದ್ದರಿಂದ ನಮ್ಮ ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್‌ಗಳಿಗೆ ಬಹಳ ತೊಂದರೆಯಾಗಿದೆ. ಇದರಿಂದ ಸುಮಾರು ೨೦ ಸಾವಿರ ಜನರಿಗೆ ಕೆಲಸದ ಅವಕಾಶವನ್ನು ಕಲ್ಪಿಸುವುದಕ್ಕೆ ಅಡ್ಡಿಯಾಗಿದೆ. ಏತಕಾ ಗಿ ಜನ ರಲ್ ಬಾಡಿ ಮಾಡದೆ ಇರುವುದು? ಇದಕ್ಕೆ ಕಾರಣವೇನು? ಅಲ್ಲದೆ ಹಿಂದಿನಮಂತ್ರಿಗಳು ಕೊನೆಯಲ್ಲಿ ಇವರಿಗೆ ಅನುಕೂಲಮಾಡಿ ಕೊಟ್ಟು ಹೋಗಿದ್ದಾರೆ. ಹೀಗಿದ್ದು ನಮ್ಮ ಜನರಿಗೆ ತುಂಬಾ ತೊಂದರೆ ಯಾಗಿದೆ.

The Minister in charge of Forest portfolio has handed over this factory horriedly one week before he relinquished his office. The interests of 150 small scale industries which are depending upon this

factory would suffer. I therefore urge upon the government not to hand over this industry to a private limited company but to run it as a government industry.

ಶ್ರೀ ಜಿ. ರಾಮೇಗೌಡ (ಆಹಾರ ಮತ್ತು ಅರಣ್ಯ ಇಲಾಖೆ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ನಾಯಕರು ಅವರ ಕಾಲಿಂಗ್ ಅಟೆನ್‌ಷನ್‌ನಲ್ಲಿ ಆ ಕಂಪನಿಯನ್ನು ಟ್ರಾನ್ಸ್‌ಫರ್ ಮಾಡಿದರು ಎಂದು ಹೇಳಿದ್ದಾರೆ. ಆದರೆ ಈ ಕಂಪನಿಯನ್ನು ಯಾರಿಗೂ ಟ್ರಾನ್ಸ್‌ಫರ್ ಮಾಡಿಲ್ಲ. ಎರಡನೆಯ ವಿಚಾರ ಏನೆಂದರೆ, ಮಾನ್ಯ ವಿರೋಧ ಪಕ್ಷದ ನಾಯಕರು, ಇಲ್ಲಿರತಕ್ಕ ಕಚ್ಚಾಮಾಲನ್ನು ಬಾಂಬೆ ಮತ್ತು ಪುದ್ದಾಸಿಗೆ ಕಳುಹಿಸುತ್ತಿದ್ದಾರೆ, ಇದರಿಂದ ನಮ್ಮಲ್ಲಿರತಕ್ಕ ಸಣ್ಣಕೈಗಾರಿಕೆಗಳವರು ನಷ್ಟವನ್ನು ಅನುಭವಿಸುತ್ತಾ ಇದ್ದಾರೆ ಎಂದು ಹೇಳಿದ್ದಾರೆ. ಸರ್ಕಾರದವರೂ ಕೂಡ ಇದೇ ಒಂದು ತತ್ವವನ್ನು, ಅಭಿಪ್ರಾಯವನ್ನು ಹೊಂದಿದ್ದಾರೆ. ನಮ್ಮಲ್ಲಿ ಕೈಗಾರಿಕೆಗಳು ಬೆಳೆಯಬೇಕು, ನಮ್ಮ ಜನಗಳಿಗೆ ಈ ಒಂದು ಅನುಕೂಲ ಸಿಕ್ಕಬೇಕು ಎನ್ನುವ ಅಭಿಪ್ರಾಯವನ್ನು ನಾವು ಒಪ್ಪಿದ್ದೇವೆ, ಆದೇ ಪ್ರಕಾರವಾಗಿ ಕೆಲಸ ಮಾಡುತ್ತಿದ್ದೇವೆ. ಈ ವಿಮ್ಕೋ ಕಂಪನಿ ಕಚ್ಚಾಮಾಲನ್ನು ಹೊರಗಡೆ ಕಳಿಸುವುದಕ್ಕೆ ಸರ್ಕಾರ ೧೯೬೫ರಲ್ಲಿ ಅಗ್ರಿಮೆಂಟ್ ಮಾಡಿದೆ. ಆಗ ಇಷ್ಟು ಸಣ್ಣ ಸಣ್ಣ ಕೈಗಾರಿಕೆಗಳು ಇರಲಿಲ್ಲ. ಈ ಅಗ್ರಿಮೆಂಟ್‌ನಲ್ಲಿ ೨೫ ಸಾವಿರ ಟನ್ ಮಿನಿಮಂ ತೆಗೆದುಕೊಂಡು ಹೋಗಬೇಕು ಎಂದು ಮಾಡಿದೆ. ೧೯೬೬ರಲ್ಲಿ ಕೂಡ ಕಚ್ಚಾ ಮಾಲನ್ನು ಹೊರಗಡೆ ತೆಗೆದುಕೊಂಡು ಹೋಗುವುದಕ್ಕೆ ೨೦ ವರ್ಷಗಳ ಅಗ್ರಿಮೆಂಟಾಗಿ ಒಪ್ಪಂದವಾಗಿದೆ. ಈ ಸರ್ಕಾರ ೧೯೭೭ ರಲ್ಲಿ ಏನು ಕೆಲಸಮಾಡಿದೆ ಎನ್ನುವುದನ್ನು ತಾವು ಗಮನಿಸಬೇಕು. ೧೯೭೭ನೇ ಅಗ್ರಿಮೆಂಟ್‌ನ್ನು ರಿನ್ಯೂ ಮಾಡುವಾಗ ಹೊರಗಡೆ ತೆಗೆದುಕೊಂಡು ಹೋಗಕೂಡದು ಎಂದು ಮಾಡಿದೆ. ಕಚ್ಚಾಮಾಲು ಸಿಕ್ಕದೇ ಹೋದರೆ ಸ್ವಲ್ಪಮಟ್ಟಿಗೆ ವಿನಿರೀಸ್ ತಯಾರುಮಾಡಿ ಹೊರಗಡೆ ತೆಗೆದುಕೊಂಡು ಹೋಗಬೇಕು, ಇಲ್ಲಿನವರಿಗೆ ಕೆಲಸ ಸಿಕ್ಕಬೇಕು ಎಂದು ಸ್ಪಷ್ಟವಾಗಿ ಅಗ್ರಿಮೆಂಟ್‌ನಲ್ಲಿ ಹಾಕಿದ್ದೇವೆ. ೨೦ ಸಾವಿರ ಮಿಟರ್ ಮಾತ್ರ ಕೊಟ್ಟು ಮಿಕ್ಕಿದ್ದು ಇದ್ದರೆ ಮಾತ್ರ ಕೊಡುತ್ತಾರೆ ಇಲ್ಲದೇ ಹೋದರೆ ಇಲ್ಲ ಎಂದು ಹೇಳುತ್ತಾರೆ.. ಹೊರ ಗಡೆ ತೆಗೆದುಕೊಂಡು ಹೋಗಕೂಡದು ಎಂದು ಸ್ಪಷ್ಟವಾಗಿ ಹೇಳಿದ್ದೇವೆ. ಆದುದರಿಂದ ಆ ಒಂದು. ಸಂಶಯ ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಇರಬೇಕಾದ್ದಿಲ್ಲ, ನಾವೇನೂ ಬದಲಾವಣೆ ಮಾಡಿಲ್ಲ ಹೊರಗಡೆ ತೆಗೆದುಕೊಂಡು ಹೋಗಬೇಕು ಎಂದು ಇಲ್ಲ. ಇಲ್ಲಿನ ಕೈಗಾರಿಕೆಗಳವರು ಪ್ರಾರಂಭ ಮಾಡುವಾಗ ಸರ್ಕಾರದ ಲೈಸೆನ್ಸಾಗಲೀ, ಅರಣ್ಯ ಖಾತೆಯ ಸಂಬಂಧವಾಗಲೀ ಪಡೆಯದೆ ಪ್ರಾರಂಭ ಮಾಡಿದ್ದಾರೆ. ಅವರು ಕೈಗಾರಿಕೆಗಳನ್ನು ಪ್ರಾರಂಭ ಮಾಡಿದ ಮೇಲೆ ನಮ್ಮಲ್ಲಿ ಅಗ್ರಿಮೆಂಟ್‌ಗೆ ಬರುತ್ತಾರೆ, ಕಚ್ಚಾಮಾಲನ್ನು ಕೇಳುತ್ತಾರೆ. ಆಗ ನಮ್ಮ ಶಕ್ತಿ ಇದ್ದಷ್ಟು ಅವರಿಗೆ ನಾವು ಕೊಟ್ಟಿದ್ದೇವೆ. ವರ್ಷ ಪೂರ್ತಿ ಸಂಪೂರ್ಣವಾಗಿ ಕೆಲಸ ಮಾಡುವುದಕ್ಕೆ ಕಚ್ಚಾಮಾಲನ್ನು ಕೊಡದೇ ಹೋದರೂ ಶಕ್ತಿ ಇದ್ದಷ್ಟು ಕೊಟ್ಟಿದ್ದೇವೆ. ವಿಮೊ ೀನವರಿಗೆ ಕಚ್ಚಾಮಾಲನ್ನು ಒಂದು ಪದಾರ್ಥ ಪರಿವರ್ಥನೆಯಾದ ಮೇಲೆ ಹೊರಗಡೆ ತೆಗೆದುಕೊಂಡು ಹೋಗಬೇಕು ಎಂದು ಕಂಡಿಷನ್ ಹಾಕಿದ್ದೇವೆ. ಆದುದರಿಂದ ಅನುಮಾನ ಪಡಬೇಕಾದ್ದಿಲ್ಲ.

Sri S. R. Bommai.—Small Scale Industrialists Association ನವರು ಮಾನ್ಯ ಮಂತ್ರಿಗಳನ್ನು ಕಂಡಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳನ್ನು ಕಂಡಿದ್ದಾರೆ, ಒಂದು ರೆಪ್ರೆಸೆಂಟೇಷನ್ ಕೊಟ್ಟಿದ್ದಾರೆ. ಆದರಲ್ಲಿ ಸ್ಪಷ್ಟವಾಗಿದೆ. ಅಲ್ಲಿ ಯಾವ ರೀತಿಯಾದ ಜನರಲ್ ಬಾಡಿ ಮೀಟಿಂಗ್ ಆಗದೇ, ಟ್ರಾನ್ಸ್‌ಫರ್ ಆಗುವುದಕ್ಕಿಂತ ಮೊದಲೇ Wimco is managing already. ಬೇಕಾದರೆ ಮಂತ್ರಿಗಳು ಹೋಗಿ ನೋಡಬಹುದು. It is completely under the management of the Wimco.

ಎರಡನೆಯ ವಿಚಾರ ಏನೆಂದರೆ, ಸ್ಮಾಲ್ ಸ್ಕೇಲ್ ಇಂಡಸ್ಟ್ರಿಯಲಿಸ್ಟ್ಸ್ ಏನಿದ್ದಾರೆ ಇವರಿಗೆ ರಾ ಮೆಟೀರಿಯಲ್ ಸಿಕ್ಕುತ್ತಾ ಇಲ್ಲ, ಇದುದ್ದನ್ನು ಕಟ್ ಮಾಡಿದ್ದೀರಿ. ಅವರು ಸರ್ಕಾರಕ್ಕೆ ಕೊಟ್ಟಿರತಕ್ಕ ರೆಪ್ರೆಸೆಂಟೇಷನ್ ಕಾಪಿ ನನ್ನ ಹತ್ತಿರ ಇದೆ. ಮೊದಲು ಯಾವರೀತಿ ಕಚ್ಚಾಮಾಲು ಸಿಕ್ಕುತ್ತಿತ್ತು, ಈಗ ಅದಕ್ಕಿಂತ ಬಹಳ ಕಡಿಮೆ ಸಿಕ್ಕುತ್ತಾ ಇದೆ. ವರ್ಕಿಂಗ್ ಕೆಪಾಸಿಟಿಗೆ, ಮೆಷನರಿಗೆ ತಕ್ಕಂತೆ ಎಷ್ಟು ಕಚ್ಚಾಮಾಲು ಸಿಗಬೇಕೋ ಅಷ್ಟು ಸಿಕ್ಕುತ್ತಾ ಇಲ್ಲ. Small scale Industrialists have taken loans from the banks. ಅವರ ಕೆಪಾಸಿಟಿಗೆ ಅನುಕೂಲವಾಗಿ ಕಚ್ಚಾಮಾಲನ್ನು

ಒದಗಿಸುವುದು ಸರ್ಕಾರದ ಕರ್ತವ್ಯ. ಇವರಿಗೆ ನೀವು ಸಾಲ ಕೊಟ್ಟಿದ್ದೀರಿ. ಇವತ್ತು ಆ ಅಗ್ರಿಮೆಂಟ್ ಪ್ರಕಾರ ವಿಮ್ಕೋನವರಿಗೆ ಕೊಟ್ಟರೆ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಕ್ಲೋಸ್ ಆಗುತ್ತವೆ. ಆದುದರಿಂದ ಸ್ಮಾಲ್ ಇಂಡಸ್ಟ್ರೀಸ್ ಕ್ಲೋಸ್ ಆಗದಂತೆ ಕಚ್ಚಾಮಾಲನ್ನು ಪೂರೈಕೆ ಮಾಡುವ ಬಗ್ಗೆ ಭರವಸೆ ಕೊಡುತ್ತೀರಾ ?

ಶ್ರೀ ಜಿ. ರಾಮೇಗೌಡ.—ಮಿನಿಮಂ ಲೀಸ್ ಮೇಲೆ ನಾವು ಅವರಿಗೆ ಕೊಟ್ಟಿದ್ದೇವೆ, ಟ್ರಾನ್ಸ್ಫರ್ ಮಾಡಿಲ್ಲ. ಟ್ರಾನ್ಸ್ಫರ್ ಮಾಡಬೇಕು ಎನ್ನುವ ಉದ್ದೇಶ ಸರ್ಕಾರಕ್ಕೆ ಇಲ್ಲ. ೫ ವರ್ಷದ ಲೀಸ್ ಮೇಲೆ ನಾವು ಕೊಟ್ಟಿದ್ದೇವೆ. ಇದರಲ್ಲಿ ಒಂದು ವರ್ಷಕ್ಕೆ ಮಿನಿಮಂ ೩೫ ಸಾವಿರ ರೂಪಾಯಿ ಕೊಡಬೇಕು ಎಂದು ಮಾಡಿದ್ದೇವೆ. ಪ್ರತಿ ವರ್ಷ ಇದು ಇನ್ನೂ ಜಾಸ್ತಿಯಾಗುವ ಒಂದು ಕಂಡೀಷನ್ ಮೇಲೆ ಅವರಿಗೆ ಕೊಟ್ಟಿದ್ದೇವೆ. ಆಲ್ಲದೆ ಒಂದು ಕ್ಯೂಬಿಕ್ ಮಿಾಟರ್‌ಗೆ ಇಷ್ಟು ರೂಪಾಯಿ ಎಂದು ಬೆಲೆ ಗೊತ್ತು ಮಾಡಿ ೩೫ ಸಾವಿರ ರೂಪಾಯಿಗೆ ಕಡಿಮೆ ಆಗಬಾರದು, ಕಡಿಮೆಯಾದರೆ ೩೫ ಸಾವಿರ ರೂಪಾಯಿ ಕೊಡಬೇಕು ಎಂದು ಹೇಳಿದ್ದೇವೆ. ಮತ್ತು ಹೊರಗಡೆ ತೆಗೆದು ಕೊಂಡು ಹೋಗ ಕೂಡದು ಎಂದು ಹೇಳಿದ್ದೇವೆ. ಮಾನ್ಯ ವಿರೋಧಪಕ್ಷದ ನಾಯಕರು ಜನರಲ್ ಬಾಡಿ ಮಿಾಟಿಂಗ್ ಆಗಿಲ್ಲ, ಅವಸರವಸರವಾಗಿ ಮಾಡಿದರು ಎಂದು ಹೇಳಿದರು. ಬೋರ್ಡ್ ಅಪ್ರೂವಲ್ ಇದೆ, ಜನರಲ್ ಬಾಡಿ ಮಿಾಟಿಂಗ್ ಸೇರಬೇಕು ಎಂದು ಗೋತ್ತಾದ ತಾರೀಖಿಗೆ ಸ್ಟೇ ಆರ್ಡರ್ ಬಂದಿರುವುದನ್ನು ನಾನು ಫೈಲಿನಲ್ಲಿ ನೋಡಿದ್ದೇನೆ. ಅದಕ್ಕೆ ಸಕಾರಣ ಏನು ಎನ್ನುವುದನ್ನು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಲೀಸ್‌ಗೆ ಕೊಡುವುದಕ್ಕೆ ಜನರಲ್ ಬಾಡಿ ಮಿಾಟಿಂಗ್‌ನಲ್ಲಿ ಒಪ್ಪಿಗೆಯಾಗಿದೆಯೇ ? Even for leases General Body consent is necessary.

ಶ್ರೀ ಜಿ. ರಾಮೇಗೌಡ.—ಸರ್ಕಾರದ್ದೇ ೬೯ ಪರ್ಸೆಂಟ್ ಷೇರ್ ಇದೆ. ಸರ್ಕಾರಿ ಅಧಿಕಾರಿ ಛೇರ್ಮನ್ ಆಗಿದ್ದಾರೆ. ಇನ್ನು ೪೧ ಪರ್ಸೆಂಟ್ ಬೇರೆಯವರದು ಇದೆ. ಜನರಲ್ ಬಾಡಿ ಮಿಾಟಿಂಗ್ ಸೇರಬೇಕಾದಾಗ ಸ್ಟೇ ಆರ್ಡರ್ ಏನು ಕೊಟ್ಟರು, ಅದನ್ನು ಏಕೆ ಕೊಟ್ಟಿದ್ದಾರೆ ಎನ್ನುವುದನ್ನು ನಾನು ಪರಿಶೀಲನೆಮಾಡುತ್ತೇನೆ. ಇವರೆಲ್ಲಾ ಅಗ್ರಿಮೆಂಟ್‌ಗೆ ಸೈನ್ ಮಾಡಿದ್ದಾರೆ. ಲೀಸ್ ಪ್ರಕಾರ ಇವರು ನಡೆಸಿಕೊಂಡು ಹೋಗುತ್ತಾರೆ. ಈ ಮ್ಯಾಚ್ ಫ್ಯಾಕ್ಟರಿಯಲ್ಲಿ ಹಳೇ ಯಂತ್ರಗಳು ಸರಿಯಾಗಿ ಕೆಲಸ ಮಾಡುತ್ತಾ ಇರಲಿಲ್ಲ. ಪೂರ್ತಾ ನಷ್ಟವಾಗುತ್ತದೆ ಎನ್ನುವಾಗ, ಬೇರೆ ಫ್ಯಾಕ್ಟರಿಗಳವರಿಗೆ ಇದನ್ನು ಲೀಸ್‌ಗೆ ತೆಗೆದುಕೊಳ್ಳುತ್ತೀರಾ ಎಂದು ಕೇಳಿದಾಗ, ಇವರು ಲಾಭದಾಯಕವಾದ ಕಂಡೀಷನ್‌ಗೆ ಒಪ್ಪಿ ಕೊಂಡರು. ಆದುದರಿಂದ ಲೀಸ್‌ಗೆ ಕೊಟ್ಟಿದ್ದೇವೆಯೇ ವಿನಾ ಟ್ರಾನ್ಸ್ಫರ್ ಮಾಡಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—೧೫೦ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಇದರ ಮೇಲೆ ಡಿಪೆಂಡ್ ಆಗಿವೆ, ೨೮ ಸಾವಿರ ಜನ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಕಚ್ಚಾಮಾಲನ್ನು ಪೂರೈಕೆ ಮಾಡುವ ಭರವಸೆ ಕೊಡುತ್ತೀರಾ ?

ಶ್ರೀ ಜಿ. ರಾಮೇಗೌಡ.—ಎಷ್ಟು ಕಚ್ಚಾಪದಾರ್ಥ ಸಿಕ್ಕುತ್ತದೆ ಎಂದು ಭರವಸೆ ತೆಗೆದುಕೊಂಡು ಸಣ್ಣ ಕೈಗಾರಿಕೆಗಳನ್ನು ಪ್ರಾರಂಭ ಮಾಡಿಲ್ಲ, ಹಾಗೆಯೇ ಪ್ರಾರಂಭ ಮಾಡಿದ್ದಾರೆ. ಎಷ್ಟೆಷ್ಟು ಸಾಧವೋ ಅಷ್ಟು ಕಚ್ಚಾಪದಾರ್ಥಗಳನ್ನು ಕೊಟ್ಟುಕೊಂಡು ಬಂದಿದ್ದೇವೆ. ಇವರು ಕೆಲಸಮಾಡುವಷ್ಟು ಕಚ್ಚಾ ಪದಾರ್ಥವನ್ನು ಒದಗಿಸಿದ್ದೇವೆ. ಒದಗಿಸಬೇಕು ಎನ್ನುವುದು ಸರ್ಕಾರದ ಉದ್ದೇಶವಾಗಿದೆ,

ಶ್ರೀ ಎಸ್. ಆರ್. ಬೊಮ್ಮಾಯಿ,—ಈ ರೀತಿ ಲೀಸ್‌ಗೆ ಕೊಟ್ಟಿರುವುದರಿಂದ ವಿಮ್ಕೋಗೆ ಪುನಾಪತಿಯಾಗಿಲ್ಲವೇ.

ಶ್ರೀ ಜಿ. ರಾಮೇಗೌಡ.—ಲೀಸ್‌ಗೆ ಕೊಟ್ಟಿದ್ದು ನಾವಲ್ಲ, ೧೯೬೫ನೇ ಇಸವಿಯಲ್ಲಿ ಆಗಿನ ಸರ್ಕಾರ ಕೊಟ್ಟಿದೆ. ಆದನ್ನು ಈಗ ತೀರ ತೆಗೆದು ಹಾಕುವುದಕ್ಕೆ ಸಾಧ್ಯವಿಲ್ಲ. ಆದರೆ ಅಭಿಪ್ರಾಯವನ್ನು ಬದಲಾಯಿಸಿದ್ದೇವೆ. ಇಲ್ಲಿನ ಪದಾರ್ಥವನ್ನು ಇಲ್ಲೇ ಉಪಯೋಗಿಸಬೇಕು ಎಂದು ಮಾಡಿದ್ದೇವೆ. ಇದನ್ನು ಸಂಪೂರ್ಣವಾಗಿ ತೆಗೆಯುವುದಕ್ಕೆ ಆಗುವುದಿಲ್ಲ. ನಮ್ಮಲ್ಲಿರತಕ್ಕ ಕಂಪೆನಿಯನ್ನು ಅವರು ನಡೆಸಿ ಕೊಂಡು ಹೋಗುತ್ತಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ,—ಸರ್ಕಾರಿ ಕಂಪೆನಿಯನ್ನು ವಿಮ್ಕೋಗೆ ಲೀಸ್‌ಗೆ ಕೊಡುವುದರಿಂದ ಇನ್‌ಹೈರಕ್ಟ್‌ಲೀ ಆ ಕಂಪನಿಯ ಕಚ್ಚಾಮಾಲು ಮನಾಪೊಲಿ ವಿಮ್ಕೋಗೆ ಹೋಗುತ್ತದೆ. Even by leasing Government Factory to Wimco the entire monopaly will go to Wimco.

ಶ್ರೀ ಜಿ. ರಾಮೇಗೌಡ.—ರ್ಗಟ್ಟರಲ್ಲಿ ಮೈ ಮ್ಯಾಚ್ ಫ್ಯಾಕ್ಟರಿ ಬಂದ್ ಆಗಿದೆ ಸರ್ಕಾರದ ಷೇರು ಇದರಲ್ಲಿದೆ. ಆದುದರಿಂದ Mysore Investment Development Corporation ನವರು ಇದನ್ನು ನಡೆಸುತ್ತಾ ಇದ್ದರು. ಇವಕ್ಕೆ ಪ್ರಾಣಕೊಟ್ಟು ಕೆಲಸ ಮಾಡಿಸತಕ್ಕದ್ದು ಸರ್ಕಾರದ ಕರ್ತವ್ಯ, ರ್ಗಟ್ಟರ ಅಗ್ರಿಮೆಂಟ್‌ನಲ್ಲಿ ಮದ್ರಾಸಿಗೆ ಮತ್ತು ಬಾಂಬೆಗೆ ಕಚ್ಚಾಮಾಲು ಹೋಗತಕ್ಕ ಪದ್ಧತಿಯನ್ನು ಈಗ ನಾವು ನಿಲ್ಲಿಸಿದ್ದೇವೆ. ಇವರೂ ಕೊಡುತ್ತಾರೆ, ಆದರೆ ಕೊಟ್ಟೇ ತೀರಬೇಕು ಎಂದು ಕಂಡೀಷನ್‌ನಲ್ಲಿ ಹಾಕಿಲ್ಲ. ಆದುದರಿಂದ ಮಾನ್ಯ ವಿರೋಧಪಕ್ಷದ ನಾಯಕರು ಅನುಮಾನ ಪಡಬೇಕಾದ್ದಿಲ್ಲ. ಈ ವಿಚಾರವನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಸ್ಮಾಲ್ ಸ್ಕೇಲ್ ಇಂಡಸ್ಟ್ರೀಗಳು ಕೆಲಸ ನಿಲ್ಲಿಸದಂತೆ ಅವುಗಳ ಕೆಪಾಸಿಟಿಗನುಗುಣವಾಗಿ ಕಚ್ಚಾಮಾಲನ್ನು ಪೂರೈಸುವ ಭರವಸೆ ಕೊಡುತ್ತೀರಾ ? Small Scale Industrialists of our own State were 28000 people are working and whom loans were given by the Banks. ಇವರಿಗೆ ವರ್ಷದಲ್ಲಿ ೩ ತಿಂಗಳು ಕೆಲಸ ಮಾಡುವಷ್ಟು ಕೊಟ್ಟರೆ ಏನು ಪ್ರಯೋಜನ. ಸರ್ಕಾರದ ನೀತಿಯಿಂದ ಇವರಿಗೆ ಹೆಲ್ಪ್ ಆಗಬೇಕು, ಪೂರ್ಣ ವರ್ಷಕ್ಕೆ ಕೆಲಸಮಾಡುವಷ್ಟು ಕಚ್ಚಾಪದಾರ್ಥವನ್ನು ಇವರಿಗೆ ಕೊಡುವಂತೆ ಭರವಸೆ ಕೊಡುತ್ತೀರಾ ?

ಶ್ರೀ ಜಿ. ರಾಮೇಗೌಡ.—ಸಣ್ಣ ಕೈಗಾರಿಕೆಗಳನ್ನು ತಯಾರು ಮಾಡುವಾಗ ಪೂರ್ಣವಾಗಿ ಕೆಲಸ ಮಾಡಿಸುವಷ್ಟು ಕಚ್ಚಾಪದಾರ್ಥದ ಸರಬರಾಜು ಏನಿದೆ ಅದನ್ನು ತಿಳಿದು ಕೊಂಡು ಪ್ರಾರಂಭ ಮಾಡಿಲ್ಲ. ಇವರು ಕೈಗಾರಿಕೆಗಳನ್ನು ಪ್ರಾರಂಭ ಮಾಡಿ ಆ ಮೇಲೆ ಕಚ್ಚಾಮಾಲಿಗೆ ನಮ್ಮಲ್ಲಿ ಬರುತ್ತಾರೆ. ನಾವು ಇಲ್ಲ ಎನ್ನತಕ್ಕ ವಿಧಾನವನ್ನು ಅನುಸರಿಸಿ, ಎಷ್ಟು ಶಕ್ತಿ ಇದೆಯೋ, ಅಷ್ಟೇಲಬಿಲಿಟಿ ಎಷ್ಟು ಇತ್ತೋ ಅಷ್ಟನ್ನು ಕೊಟ್ಟು ಕೊಂಡು ಬಂದಿದ್ದೆವೆ, ಅವನ್ನೇ ಮುಂದುವರೆಸಿಕೊಂಡು ಹೋಗುತೆ ೀವೆ.

(ii) re : Inadequate representation in State Service of the SCs. and STs, and thier Service Conditions.

† SRI C. M. ARUMUGAM (KGF).—Sir, the other day, our Hon'ble Chief Minister made a statement in this House that the Government had decided to make reservations in promotions for SCs/STs. I welcomed it as also most of the members. I thought I should bring to the notice of this House the pitiable condition to which the Scheduled Castes and Scheduled Tribes are reduced. We have to see whether they are adequately represented in Government services and public sector undertakings and other institutions. The Government of Karnataka passed an order on 4-3-1977 directing all the departmental Secretaries and managements of public sector undertakings to make reservation for the Scheduled Castes and Scheduled Tribes, and they have also directed that there must be reservation even in the posts also. This Government Order was issued in supersession of the Government order dated 9-7-1975. and all earlier orders making reservations in appointments in State Civil Services for the Scheduled Castes, Scheduled Tribes and other backward classes of citizens